ಓ.ಎಸ್. ನಂಬರಃ 122/2021

ಪಿ. ಡಬ್ಲ್ಯೂಃ 1

<u>(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/06/2024 )</u>

**<u>ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಎಸ್ ಬಿ ಬಿ ವಕೀಲರಿಂದ,</u>**

ನಾನು ಈ ದಾವೆಯಲ್ಲಿ 4 ನೇ ವಾದಿ ಇದ್ದು, ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ .

ದಾವಾ ಆಸ್ತಿಗೆ ಸಂಬಂಧಿಸಿದಂತೆ ಆರು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–6 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೈಬರಹದ ಆರ್ ಟಿ ಸಿ (ಮೂರು ಪುಟಗಳು) ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–7 ಎಂದು, ಬೈಲೂರು ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ 6050, ಮಾವಳ್ಳಿ 1 ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ ಎ 3435 ರ ಯಥಾನಕಲನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–8 ಮತ್ತು ನಿಪಿ–9 ಎಂದು, ಮಾವಳ್ಳಿ –1 ಗ್ರಾಮಕ್ಕೆ ಸೇರಿದ ಮ್ಯುಟೇಶನ್ ಎಂಟ್ರಿ ಸಂಖ್ಯೆ 9407, ಎ5379 ರ ಯಥಾನಕಲನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–10 ಮತ್ತು ನಿಪಿ–11 ಎಂದು, ದಿನಾಂಕ 18.01.1973 ರ ವಿಲ್ ನಾಮೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–12, ದಿನಾಂಕ 09.09.1998 ರ ಕ್ರಯಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–13 ಎಂದು ಗುರುತಿಸಲಾಯಿತು.

**<u>ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.</u>**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ.**